ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಬಾಗಲಕೋಟ

UNIVERSITY OF HORTICULTURAL SCIENCES, BAGALKOT

KRISHI VIGYAN KENDRA, KOLAR

ಕೃಷಿ ವಿಜ್ಞಾನ ಕೇಂದ್ರ, ಕೋಲಾರ

# NEWS LETTER | ವಾರ್ತಾ ಪತ್ರಿಕೆ

ಸಂಪುಟ: 1 ಜುಲೈ, 2013–ಡಿಸೆಂಬರ್2013 ಸಂಚಿಕೆ: 2

## ವೈಜ್ಞಾನಿಕ ಸಲಹಾ ಸಮಿತಿ ಸಭೆ



ಕೃಷಿ ವಿಜ್ಞಾನ ಕೇಂದ್ರ, ಕೋಲಾರದಲ್ಲಿ ದಿನಾಂಕ 07–08–2013 ರಂದು ಮೊದಲ ವೈಜ್ಞಾನಿಕ ಸಲಹಾ ಸಮಿತಿ ಸಭೆಯನ್ನು ಹಮ್ಮಿಕೊಳ್ಳಲಾಗಿತ್ತು ಡಾ. ಎಸ್. ಬಿ. ದಂಡಿನ್‌ರವರು, ಕುಲಪತಿಗಳು, ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಬಾಗಲಕೋಟೆ ಸಭೆಯ ಅಧ್ಯಕ್ಷತೆಯನ್ನು ವಹಿಸಿಕೊಂಡಿದ್ದರು. ಡಾ. ಪ್ರಭುಕುಮಾರ್, ವಲಯ ಯೋಜನಾ ನಿರ್ದೇಶಕರು, ಬೆಂಗಳೂರು, ಡಾ. ಎ. ಬಿ. ಪಾಟೀಲ್, ವಿಸ್ತರಣಾ ನಿರ್ದೇಶಕರು, ಡಾ. ಬಿ. ರಾಜು, ಶಿಕ್ಷಣ ನಿರ್ದೇಶಕರು, ವೈಜ್ಞಾನಿಕ ಸಮಿತಿಯ ಎಲ್ಲಾ ಸದಸ್ಯರುಗಳು, ಇಲಾಖಾ ಮುಖ್ಯಸ್ಥರು, ರೈತ ಪ್ರತಿನಿಧಿಗಳು ಮತ್ತು ಪ್ರಗತಿಪರ ರೈತರುಗಳು ಸಭೆಗೆ ಭಾಗವಹಿಸಿದ್ದರು.



ಕೃಷಿ ವಿಜ್ಞಾನ ಕೇಂದ್ರದ ಕಾರ್ಯಕ್ರಮ ಸಂಯೋಜಕರಾದ ಕೆ. ತುಳಸಿರಾಮ್ ಜಿಲ್ಲೆಯ ಕೃಷಿಗೆ ಸಂಬಂಧಿಸಿದ ಪಕ್ಷಿನೋಟ ಹಾಗೂ ಕೃಷಿ ವಿಜ್ಞಾನ ಕೇಂದ್ರದ 2013–14ನೇ ಸಾಲಿನ ಕ್ರಿಯಾಯೋಜನೆಯ ಮಾಹಿತಿಯನ್ನು ಸಭೆಯಲ್ಲಿ ಮಂಡಿಸಿದರು. ಇದಕ್ಕೆ ಸಭೆಯು ಒಪ್ಪಿಗೆ ಸೂಚಿಸಿತು. ಸಭೆಗೆ ಭಾಗವಹಿಸಿದ್ದ ಎಲ್ಲಾ ಸದಸ್ಯರುಗಳಿಂದ ಹೆಚ್ಚಿನ ಪ್ರಮಾಣದಲ್ಲಿ ಪ್ರಾತ್ಯಕ್ಷತೆ ಹಾಗೂ ತರಬೇತಿಗಳನ್ನು ಹಮ್ಮಿಕೊಳ್ಳುವಂತೆ ನಿರ್ಣಯ ಕೈಗೊಳ್ಳಲಾಯಿತು ಮತ್ತು ಮುಂದಿನ ಸಾಲಿನ ಕ್ರಿಯಾಯೋಜನೆಯಲ್ಲಿ ಸೇರಿಸಲು ತೀರ್ಮಾನಿಸಲಾಯಿತು.

## ಕೃಷಿ ವಿಜ್ಞಾನ ಕೇಂದ್ರದ ಶಿಲನ್ಯಾಸ (ಅಡಿಗಲ್ಲು) ಸಮಾರಂಭ



ಕೃಷಿ ವಿಜ್ಞಾನ ಕೇಂದ್ರ ಕಟ್ಟಡ ನಿರ್ಮಾಣದ ಶಿಲಾನ್ಯಾಸವನ್ನು, ತೋಟಗಾರಿಕೆ ಮಹಾವಿದ್ಯಾಲಯ, ಕೋಲಾರ ಕಟ್ಟಡ ಉದ್ಘಾಟನ ಸಮಾರಂಭದ ಜೊತೆಯಲ್ಲಿ ದಿನಾಂಕ 8–8–2013 ರಂದು ನೆರವೇರಿಸಲಾಯಿತು. ಶ್ರೀ ಕೃಷ್ಣ ಬೈರೆಗೌಡ, ಮಾನ್ಯ ಕೃಷಿ ಸಚಿವರು, ಕರ್ನಾಟಕ ಸರ್ಕಾರ, ಡಾ. ಎಸ್. ಅಯ್ಯಪ್ಪನ್, ಮಹಾನಿರ್ದೇಶಕರು, ಭಾರತೀಯ ಕೃಷಿ ಅನುಸಂಧಾನ ಪರಿಷತ್, ನವದೆಹಲಿ, ಡಾ. ಶಂಕರಲಿಂಗೆಗೌಡ, ಮುಖ್ಯ ಕಾರ್ಯದರ್ಶಿಗಳು, ತೋಟಗಾರಿಕೆ ಇಲಾಖೆ, ಶ್ರೀ ವರ್ತೂರು ಪ್ರಕಾಶ್, ಮಾನ್ಯ ಶಾಸಕರು, ಕೋಲಾರ ವಿಧಾನಸಭಾ ಕ್ಷೇತ್ರ, ಡಾ. ಪ್ರಭುಕುಮಾರ್, ವಲಯ ಯೋಜನಾ ನಿರ್ದೇಶಕರು ಬೆಂಗಳೂರು, ಡಾ. ಎಸ್. ಬಿ. ದಂಡಿನ್‌ರವರು ಕುಲಪತಿಗಳು, ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಬಾಗಲಕೋಟೆ ಸಮಾರಂಭದಲ್ಲಿ ಭಾಗವಹಿಸಿದ್ದರು. ಕೃಷಿ ವಿಜ್ಞಾನ ಕೇಂದ್ರ ಕಟ್ಟಡ ನಿರ್ಮಾಣದ ಶಿಲಾನ್ಯಾಸವನ್ನು ಡಾ. ಎಸ್. ಅಯ್ಯಪ್ಪನ್, ಮಹಾನಿರ್ದೇಶಕರು, ಭಾರತೀಯ ಕೃಷಿ ಅನುಸಂಧಾನ ಪರಿಷತ್, ನವದೆಹಲಿ ನೆರವೇರಿಸಿದರು.

## ಕೃಷಿ ವಿಜ್ಞಾನ ಕೇಂದ್ರಗಳ ರಾಷ್ಟ್ರೀಯ ಸಮ್ಮೇಳನ, ಬೆಂಗಳೂರು

ವಲಯ ಯೋಜನಾ ನಿರ್ದೇಶನಾಲಯ, ವಲಯ 8, ಬೆಂಗಳೂರು ಮತ್ತು ಕೃಷಿ ವಿಶ್ವವಿದ್ಯಾಲಯ ಬೆಂಗಳೂರು ಜಂಟಿಯಾಗಿ ಆಯೋಜಿಸಿದ್ದ ಕೃಷಿ ವಿಜ್ಞಾನ ಕೇಂದ್ರಗಳ ರಾಷ್ಟ್ರೀಯ ಸಮ್ಮೇಳನವು 23 ರಿಂದ 25ನೇ ಅಕ್ಟೋಬರ್ 2013 ರಂದು ನಡೆಯಿತು. ಸದರಿ ಸಮ್ಮೇಳನದಲ್ಲಿ ಕೃಷಿ ವಿಜ್ಞಾನ ಕೇಂದ್ರ, ಕೋಲಾರ ತಂಡವು ತಾಂತ್ರಿಕ ಸಮಾವೇಶದಲ್ಲಿ ಮತ್ತು ಕಾರ್ಯಗಳಲ್ಲಿ ಸಕ್ರಿಯವಾಗಿ ಭಾಗವಹಿಸಿತ್ತು.

## ವಿಶ್ವ ಆಹಾರ ದಿನಾಚರಣೆ



ವಿಶ್ವ ಆಹಾರ ದಿನಾಚರಣೆಯನ್ನು ದಿನಾಂಕ 17–10–2013 ರಂದು **"ಆಹಾರ ಭದ್ರತೆ ಮತ್ತು ಪೌಷ್ಟಿಕತೆಯಲ್ಲಿ ಸುಸ್ಥಿರ ಆಹಾರ ಪದ್ಧತಿಗಳು"** ಎಂಬ ಧ್ಯೇಯ ವಾಕ್ಯದೊಂದಿಗೆ ಕೃಷಿ ವಿಜ್ಞಾನ ಕೇಂದ್ರದ ವತಿಯಿಂದ ಮಾಲೂರು ತಾಲ್ಲೂಕಿನ ತಂಬಿಹಳ್ಳಿ ಗ್ರಾಮದಲ್ಲಿ ಏರ್ಪಡಿಸಲಾಗಿತ್ತು. ಈ ಕಾರ್ಯಕ್ರಮದಲ್ಲಿ ಸಮಗ್ರ ಕೃಷಿ ಪದ್ಧತಿಯ ಬಗ್ಗೆ ತಿಳುವಳಿಕೆ, ಆಹಾರ ಮತ್ತು ಪೌಷ್ಠಿಕತೆ ಭದ್ರತೆಯಲ್ಲಿ ಸಿರಿ ಧಾನ್ಯಗಳ ಮಹತ್ವದ ಬಗ್ಗೆ ಮಾಹಿತಿ ನೀಡಲಾಯಿತು. ಸುಮಾರು 40 ರೈತ ಮತ್ತು ರೈತಮಹಿಳೆಯರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು. ಡಾ. ಆಂಜನೇಯರೆಡ್ಡಿ, ವಿಷಯ ತಜ್ಞರು (ಸಸ್ಯ ಸಂರಕ್ಷಣೆ), ಶ್ರೀಮತಿ ಬಿ.ಆರ್. ಪ್ರೇಮಲತ, ವಿಷಯ ತಜ್ಞರು (ಬೇಸಾಯ ಶಾಸ್ತ್ರ) ಹಾಗೂ ಸಹಾಯಕ ಕೃಷಿ ನಿರ್ದೇಶಕರು ಮಾಲೂರು ಕಾರ್ಯಕ್ರಮದಲ್ಲಿ ಹಾಜರಿದ್ದರು.

## ಮೈಸೂರು ದಸರಾ ಮೇಳ

ಕೃಷಿ ವಿಜ್ಞಾನ ಕೇಂದ್ರ, ಕೋಲಾರವು ತೋಟಗಾರಿಕೆ ಸಂಶೋಧನ ಕೇಂದ್ರ, ಹೊಗಳಗೆರೆ ಮತ್ತು ತೋಟಗಾರಿಕೆ ಮಹಾವಿದ್ಯಾಲಯ ಮೈಸೂರು ಜೊತೆಯಲ್ಲಿ ದಿನಾಂಕ 5 ರಿಂದ 11 ಅಕ್ಟೋಬರ್ 2013 ರಂದು ಮೈಸೂರು ದಸರಾ ಮೇಳದಲ್ಲಿ ಭಾಗವಹಿಸಿದ್ದವು. ಸದರಿ ಮೇಳದಲ್ಲಿ ಕೃಷಿ ವಿಜ್ಞಾನ ಕೇಂದ್ರ ಮತ್ತು ತೋಟಗಾರಿಕೆ ಸಂಶೋಧನ ಕೇಂದ್ರ ಕೋಲಾರ ಜಿಲ್ಲೆಯ ತೋಟಗಾರಿಕೆ ಕ್ಷೇತ್ರದಲ್ಲಿ ಸಾಧನೆಯ ಬಗ್ಗೆ ಸಜೀವ ಮಾದರಿಗಳ ಪ್ರದರ್ಶನಗಳು, ಮುದ್ರಣಗಳು, ಭಾಗ್ಯ ನುಗ್ಗೆ ಬೀಜ ಮತ್ತು ಮಾವು ಕಸಿಯ ವಿವಿಧ ಮಾದರಿಗಳನ್ನು ಪ್ರದರ್ಶಿಸಲಾಯಿತು.

## ಜಿಲ್ಲಾ ಮಟ್ಟದ ಕೀಟ ಮತ್ತು ರೋಗ ಬಾದೆಯ ಸರ್ವೇಕ್ಷಣ



ಕೃಷಿ ಇಲಾಖೆ ಹಾಗೂ ಕೃಷಿ ವಿಜ್ಞಾನ ಕೇಂದ್ರ ಕೋಲಾರ ಇವರ ಸಂಯುಕ್ತಾಶ್ರಯದಲ್ಲಿ ವಿವಿಧ ಬೆಳೆಗಳ ಜಿಲ್ಲಾ ಮಟ್ಟದ ಕೀಟ ಮತ್ತು ರೋಗಬಾಧೆಯ ಸರ್ವೇಕ್ಷಣವನ್ನು ದಿನಾಂಕ 21–10–2013 ರಂದು ಜಂಟಿಯಾಗಿ ಕೈಗೊಳ್ಳಲಾಯಿತು, ಕೋಲಾರ, ಶ್ರೀನಿವಾಸಪುರ ಮತ್ತು ಮುಳಬಾಗಿಲು ತಾಲ್ಲೂಕುಗಳ ಒಟ್ಟು 12 ಗ್ರಾಮಗಳಿಗೆ ಭೇಟಿ ನೀಡಿ ತೊಗರಿ, ಮುಸುಕಿನ ಜೋಳ, ಭತ್ತ, ರಾಗಿ ಮತ್ತು ಶೇಂಗಾ ಬೆಳೆಗಳು ಕೀಟ ಮತ್ತು ರೋಗಕ್ಕೆ ತುತ್ತಾಗಿರುವುದನ್ನು ದಾಖಲಿಸಲಾಯಿತು. ಸದರಿ ಅವಧಿಯಲ್ಲಿ ವೀಕ್ಷಿಸಿ, ಗಮನಿಸಿ ದಾಖಲಿಸಿದ ಆಂಶವನ್ನು ವಿವಿಧ ಕೀಟ ಮತ್ತು ರೋಗಗಳ ನಿರ್ವಹಣೆಗೆ ಸೂಕ್ತ ಶಿಫಾರಸ್ಸುಗಳೊಂದಿಗೆ ಕೃಷಿ ಆಯುಕ್ತರು, ಕೃಷಿ ಇಲಾಖೆ, ಬೆಂಗಳೂರು ಹಾಗೂ ಸೂಕ್ತ ಹತೋಟಿ ಕ್ರಮಗಳೊಂದಿಗೆ ಬೆಳೆ ಸಂರಕ್ಷಣೆ ಕೈಗೊಳ್ಳಲು ಜಿಲ್ಲೆಯ ಎಲ್ಲಾ ತಾಲ್ಲೂಕು ಸಹಾಯಕ ಕೃಷಿ ನಿರ್ದೇಶಕರುಗಳಿಗೆ ನೀಡಲಾಯಿತು. ಈ ಕಾರ್ಯಕ್ರಮದಲ್ಲಿ ಶ್ರೀ ಚಿಕ್ಕಣ್ಣ, ಜಂಟಿ ಕೃಷಿ ನಿರ್ದೇಶಕರು, ಶ್ರೀ ರಾಮಲಿಂಗಯ್ಯ, ಕೃಷಿ ಸಹಾಯಕ ನಿರ್ದೇಶಕರು, ಕೆ. ತುಳಸಿರಾಮ್, ಕಾರ್ಯಕ್ರಮ ಸಂಯೋಜಕರು, ಕೃಷಿ ವಿಜ್ಞಾನ ಕೇಂದ್ರ, ಕೋಲಾರ, ಡಾ. ಬಿ. ಆಂಜನೇಯ ರೆಡ್ಡಿ, ವಿಷಯ ತಜ್ಞರು (ಸಸ್ಯ ಸಂರಕ್ಷಣೆ) ಮತ್ತು ವಿವಿಧ ತಾಲ್ಲೂಕು ಮಟ್ಟದ ಅಧಿಕಾರಿಗಳು ಭಾಗವಹಿಸಿದ್ದರು.

## ಜಿಲ್ಲಾ ಮಟ್ಟದ ಆತ್ಮ ಚಾಲನಾ ಸಮಿತಿ ಸಭೆ

ಆತ್ಮ ಯೋಜನೆಯಡಿ ದಿನಾಂಕ 30–10–2013 ರಂದು ಜಿಲ್ಲಾ ಪಂಚಾಯತ್ ಕಾರ್ಯನಿರ್ವಹಣಾ ಅಧಿಕಾರಿಗಳ ಅಧ್ಯಕ್ಷತೆಯಲ್ಲಿ ಜಿಲ್ಲಾ ಮಟ್ಟದ ಆತ್ಮ ಚಾಲನಾ ಸಮಿತಿ ಸಭೆಯಲ್ಲಿ ಡಾ. ಕೆ. ತುಳಸಿರಾಮ್, ಕಾರ್ಯಕ್ರಮ ಸಂಯೋಜಕರು, ಕೃಷಿ ವಿಜ್ಞಾನ ಕೇಂದ್ರ, ಕೋಲಾರ ಭಾಗವಹಿಸಿದ್ದರು. ಸಭೆಯಲ್ಲಿ 2012–13ನೇ ಸಾಲಿನ ಆತ್ಮ ಯೋಜನೆಯಡಿ ವಿವಿಧ ಇಲಾಖೆಗಳ ಸಾಧಿಸಿದ ಪ್ರಗತಿ ವಿವರ, 2013–14ನೇ ಸಾಲಿನ ತಾಲ್ಲೂಕು ಮತ್ತು ಇಲಾಖಾವಾರು ಭೌತಿಕ ಆರ್ಥಿಕ ಚಟುವಟಿಕೆಗಳ ಕ್ರೀಯಾಯೋಜನೆಯ ಬಗ್ಗೆ ಅನುಮೋದನೆ ಮತ್ತು ಅನುಮೋದನೆಗೊಂಡಿರುವ ಕ್ರೀಯಾಯೋಜನೆಯನ್ನು ಇಲಾಖೆಗಳಿಂದ ಅನುಷ್ಠಾನಗೊಳಿಸುವ ಬಗ್ಗೆ ಸಭೆಯಲ್ಲಿ ಚರ್ಚಿಸಲಾಯಿತು.



ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಬಾಗಲಕೋಟೆ ವತಿಯಿಂದ ದಿನಾಂಕ 22 ರಿಂದ 25ನೇ ನವೆಂಬರ್ 2013 ರಂದು ಏರ್ಪಡಿಸಿದ್ದ ತೋಟಗಾರಿಕೆ ಮೇಳದಲ್ಲಿ ಕೃಷಿ ವಿಜ್ಞಾನ ಕೇಂದ್ರ, ಕೋಲಾರ, ತೋಟಗಾರಿಕೆ ಮಹಾವಿದ್ಯಾಲಯ ಕೋಲಾರ ಮತ್ತು ತೋಟಗಾರಿಕೆ ಸಂಶೋಧನೆ ಕೇಂದ್ರ, ಹೊಗಳಗೆರೆ ಜೊತೆಯಾಗಿ ಭಾಗವಹಿಸಿದ್ದು ಕೋಲಾರ ಜಿಲ್ಲೆಯ ತೋಟಗಾರಿಕೆ ಕ್ಷೇತ್ರದಲ್ಲಿನ ಸಾಧನೆಯ ಮಾಹಿತಿ ಫಲಕಗಳು, ಸಜೀವ ಮಾದರಿಗಳು, ಬಿತ್ತಿಪತ್ರಗಳನ್ನು ಪ್ರದರ್ಶಿಸಲಾಯಿತು.

**ಉಚಿತ ಕೃಷಿ ತಾಂತ್ರಿಕ ಸಲಹೆಗಾಗಿ**
**ಕಿಸಾನ ಕಾಲ್ ಸೆಂಟರ್ 1551 ನ್ನು ಸಂಪರ್ಕಿಸಿ**

## ಶ್ರೇಷ್ಠ ತೋಟಗಾರಿಕೆ ರೈತ ಪ್ರಶಸ್ತಿ

2013–14ನೇ ಸಾಲಿನ ಶ್ರೇಷ್ಠ ತೋಟಗಾರಿಕೆ ರೈತ ಪ್ರಶಸ್ತಿಯನ್ನು ಶ್ರೀ. ಪಿ. ಹನುಮಂತ ರೆಡ್ಡಿ, ಪಾಲೂರಹಳ್ಳಿ, ಮುಳಬಾಗಿಲು ತಾಲ್ಲೂಕು, ಕೋಲಾರ ಜಿಲ್ಲೆ ಇವರಿಗೆ ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ ಬಾಗಲಕೋಟೆಯಲ್ಲಿ 22–25ನೇ ನವಂಬರ್ 2013 ರಂದು ನಡೆದ ತೋಟಗಾರಿಕಾ ಮೇಳದಲ್ಲಿ ನೀಡಲಾಯಿತು. ಸದರಿ ರೈತರು 50 ಎಕರೆ ಜಮೀನಿನಲ್ಲಿ 40 ಎಕರೆ ಪ್ರದೇಶಗಳಲ್ಲಿ ಸಪೋಟ, ಮಾವು, ಸೀಬೆ, ಬಾದಮಿ, ನೇರಳೆ, ಸೀತಾಫಲ, ಅಂಜೂರ ಬೆಳೆಗಳ ಬೇಸಾಯ ಮಾಡುತ್ತಿದ್ದು ಇನ್ನುಳಿದ 10 ಎಕರೆ ಪ್ರದೇಶದಲ್ಲಿ ಒಣಬೇಸಾಯ ಮಾಡುತ್ತಿರುತ್ತಾರೆ. ಇವರು ತಮ್ಮ ಜಮೀನಿನಲ್ಲಿ ಟ್ರಂಚ್ ಬಂಡ್, ಕೃಷಿ ಹೊಂಡ, ಚೆಕ್ ಡ್ಯಾಮ್, ಬದುಗಳಲ್ಲಿ ಗಿನಿ, ಸರಟಾ ಹುಲ್ಲುಗಳನ್ನು ಬೆಳೆಸಿ ಜೈವಿಕ ಬದು ನಿರ್ಮಾಣ, ಸಾವಯವ ಗೊಬ್ಬರ ತಯಾರಿಕೆ ಮಾಡಿದ್ದು, ಬೆಳೆದ ಉತ್ಪನ್ನಗಳನ್ನು 3 ದರ್ಜೆಗಳಾಗಿ ವಿಂಗಡಿಸಿ ಮಾರಾಟ ಮಾಡುತ್ತಿರುತ್ತಾರೆ.

## ದ್ವೈ ಮಾಸಿಕ ಕಾರ್ಯಗಾರ




ಕೃಷಿಗೆ ಸಂಬಂಧಿಸಿದ ವಿವಿಧ ಇಲಾಖೆಗಳ ಅಧಿಕಾರಿಗಳ ಜೊತೆ ಎರಡು ತಿಂಗಳಿಗೆ ಒಮ್ಮೆಯಂತೆ ಸಭೆಯನ್ನು ಕರೆದು ಹಾಲಿ ಕೃಷಿಗೆ ಸಂಬಂಧಿಸಿದ ಜಿಲ್ಲೆಯ ಪಕ್ಷಿನೋಟ ಹಾಗೂ ಮುಂದಿನ 2 ತಿಂಗಳ ಅವಧಿಯಲ್ಲಿ ಕೈಗೊಳ್ಳುವ ಕಾರ್ಯಕ್ರಮಗಳ ಪೂರ್ವಯೋಜನೆಯ ದ್ವೈಮಾಸಿಕ ಕಾರ್ಯಗಾರವನ್ನು ವಿಸ್ತರಣಾ ಘಟಕಗಳಾದ ಕೃಷಿ ವಿಜ್ಞಾನ ಕೇಂದ್ರ ಮತ್ತು ವಿಸ್ತರಣಾ ಶಿಕ್ಷಣ ಘಟಕಗಳು ದ್ವೈ ಮಾಸಿಕ ಕಾರ್ಯಗಾರವನ್ನು ಆಯೋಜಿಸುತ್ತಿವೆ. ಈ ಹಿಂದೆ ಚಿಕ್ಕಬಳ್ಳಾಪುರ ಜಿಲ್ಲೆಯ ಕೋಲಾರ ಜಿಲ್ಲೆಯ ಭಾಗವಾಗಿದ್ದು, ಇಂತಹ ಕಾರ್ಯಕ್ರಮಗಳನ್ನು ಕಾಗತಿ ಫಾರಂ, ಚಿಂತಾಮಣಿ ತಾಲ್ಲೂಕಿನ ಕೃಷಿ ವಿಜ್ಞಾನ ಕೇಂದ್ರ, ಚಿಕ್ಕಬಳ್ಳಾಪುರ ಸಹಯೋಗದೊಂದಿಗೆ ಆಯೋಜಿಸಲಾಗುತ್ತಿತ್ತು. ಪ್ರಸ್ತುತ ಕೋಲಾರ ಜಿಲ್ಲೆಯಿಂದ ಪ್ರತ್ಯೇಕಗೊಂಡಿದ್ದರೂ ಇಂತಹ ಕಾರ್ಯಕ್ರಮಗಳನ್ನು ಮುಂದುವರೆಸಿದೆ. ಪ್ರಸ್ತುತ ಕೃಷಿ ವಿಜ್ಞಾನ ಕೇಂದ್ರವು ತೋಟಗಾರಿಕೆ ಮಹಾವಿದ್ಯಾಲಯ ಕೋಲಾರದಲ್ಲಿ ಪ್ರಾರಂಭಗೊಂಡಿರುವುದರಿಂದ ಮಾನ್ಯ ಕೃಷಿ ಆಯುಕ್ತರು ಕೋಲಾರ ಜಿಲ್ಲೆಗೆ ಸಂಬಂಧಿಸಿದ ದ್ವೈ ಮಾಸಿಕ ಸಭೆಯನ್ನು ಕೃಷಿ ವಿಜ್ಞಾನ ಕೇಂದ್ರ ಕೋಲಾರದಲ್ಲಿ ನಡೆಸಲು ಆದೇಶ ನೀಡಿದ್ದು, ಇದರಂತೆ ಡಿಸೆಂಬರ್ 12–13 ರಂದು ಮೊದಲ ದ್ವೈ ಮಾಸಿಕ ಕಾರ್ಯಗಾರವನ್ನು ಕೃಷಿಗೆ ಸಂಬಂಧಿಸಿದ ವಿವಿಧ ಇಲಾಖೆಗಳ ಅಧಿಕಾರಿಗಳೊಂದಿಗೆ ನಡೆಸಲಾಯಿತು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಡಾ. ಹೊನ್ನಬೈರಯ್ಯ ಸಹಸಂಶೋಧನಾ ನಿರ್ದೇಶಕರು ಹೊಗಳಗೆರೆರವರು ವಹಿಸಿದ್ದರು. ಡಾ. ವಿ. ನಾಚೇಗೌಡ, ಡೀನ್ (ತೋಟಗಾರಿಕೆ), ತೋಟಗಾರಿಕಾ ಮಹಾವಿದ್ಯಾಲಯ, ಕೋಲಾರ, ಶ್ರೀ ಚಿಕ್ಕಣ್ಣ, ಜಂಟಿ ಕೃಷಿನಿರ್ದೇಶಕರು, ಕೋಲಾರ ಹಾಗೂ ಶ್ರೀ ಚಂದ್ರಶೇಖರ್, ತೋಟಗಾರಿಕೆ ಉಪನಿರ್ದೇಶಕರು, ಕೋಲಾರ ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದರು. ಕಾರ್ಯಗಾರದ ಎರಡನೇ ದಿನದಂದು ಬಂಗಾರಪೇಟೆ ತಾಲ್ಲೂಕಿನ ನತ್ತಾ ಗ್ರಾಮದಲ್ಲಿ ನಡೆದ ಕ್ಷೇತ್ರೋತ್ಸವ ಮತ್ತು ಶ್ರೀಮತಿ ರಾಮಕ್ಕ, ಮಾನ್ಯ ಶಾಸಕರು, ಬಂಗಾರಪೇಟೆ ಕ್ಷೇತ್ರ ರವರ ಅಧ್ಯಕ್ಷತೆಯಲ್ಲಿ ತೊಗರಿ ನೆಡುವ ಪದ್ಧತಿಯ ಕ್ಷೇತ್ರೋತ್ಸವವನ್ನು ಹಮ್ಮಿಕೊಳ್ಳಲಾಗಿತ್ತು. ಡಾ. ಹೊನ್ನಬೈರಯ್ಯ, ಸಹಸಂಶೋಧನ ನಿರ್ದೇಶಕರು. ಕೆ. ತುಳಸಿರಾಮ್, ಕಾರ್ಯಕ್ರಮ ಸಂಯೋಜಕರು ಮತ್ತು ಡಾ. ಮಂಜುನಾಥ್ ರೆಡ್ಡಿ, ಸಹಾಯಕ ಪ್ರಾಧ್ಯಾಪಕರು ಇವರುಗಳು ಸಮಗ್ರ ಕೃಷಿ ಪದ್ಧತಿ, ಸಮಗ್ರ ಕೀಟ ನಿರ್ವಹಣೆ ಮತ್ತು ಸಮಗ್ರ ರೋಗ ನಿರ್ವಹಣೆಯ ಬಗ್ಗೆ ವಿಷಯ ಮಂಡಿಸಿದರು. ಶ್ರೀ ಚಿಕ್ಕಣ್ಣ, ಜಂಟಿ ಕೃಷಿ ನಿರ್ದೇಶಕರು, ಕೋಲಾರ, ಶ್ರೀ ನಾಗರಾಜ್, ಸಹಾಯಕ ಕೃಷಿ ನಿರ್ದೇಶಕರು, ಬಂಗಾರಪೇಟೆ, ಕೃಷಿಗೆ ಸಂಬಂಧಪಟ್ಟ ಅಧಿಕಾರಿಗಳು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು. ಸುಮಾರು 200 ರೈತರು ಕಾರ್ಯಕ್ರಮದಲ್ಲಿ ಹಾಜರಿದ್ದರು.



## ಎಸ್.ಆರ್.ಇ.ಪಿ. (ವ್ಯವಸ್ಥಿತ ಸಂಶೋಧನೆ ಮತ್ತು ವಿಸ್ತರಣಾ ಯೋಜನೆ) ಮರು ತಯಾರಿಕೆ ಸಭೆ

ವ್ಯವಸ್ಥಿತ ಸಂಶೋಧನೆ ಮತ್ತು ವಿಸ್ತರಣಾ ಯೋಜನೆಯ ಮರು ತಯಾರಿಕೆ ಪೂರ್ವಚಾಲನೆ ಸಭೆಯನ್ನು ದಿನಾಂಕ 20–12–2013 ರಂದು ಜಂಟಿ ಕೃಷಿ ನಿರ್ದೇಶಕರ ಕಛೇರಿ ಕೋಲಾರದಲ್ಲಿ ಹಮ್ಮಿಕೊಳ್ಳಲಾಗಿತ್ತು. ಸಭೆಯಲ್ಲಿ ಡಾ. ಕೆ. ತುಳಸಿರಾಮ್, ಕಾರ್ಯಕ್ರಮ ಸಂಯೋಜಕರು, ಕೃಷಿ ವಿಜ್ಞಾನ ಕೇಂದ್ರ, ಕೋಲಾರರವರು ಕೃಷಿಗೆ ಸಂಬಂಧಿಸಿದ ಇಲಾಖೆಗಳ ಅಧಿಕಾರಿಗಳೊಂದಿಗೆ ಭಾಗವಹಿಸಿದ್ದರು.

## ರೈತ ದಿನಾಚರಣೆ (ಕಿಸಾನ್ ದಿವಸ್)

ಕೃಷಿ ಇಲಾಖೆಯ ಸಹಯೋಗದೊಂದಿಗೆ ಕೃಷಿ ವಿಜ್ಞಾನ ಕೇಂದ್ರವು, ಕೋಲಾರದ ರಂಗಮಂದಿರದಲ್ಲಿ ನಡೆದ ರೈತ ದಿನಾಚರಣೆ ಕಾರ್ಯಕ್ರಮದಲ್ಲಿ ಭಾಗವಹಿಸಲಾಗಿತ್ತು. ಕಾರ್ಯಕ್ರಮದಲ್ಲಿ ಶ್ರೀ. ಕೆ. ಹೆಚ್. ಮುನಿಯಪ್ಪರವರು, ಮಾನ್ಯ ಸಣ್ಣ ಮತ್ತು ಮಧ್ಯಮ ಕೈಗಾರಿಕೆ ಸಚಿವರು, ಕೇಂದ್ರ ಸರ್ಕಾರ ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದರು. ಶ್ರೀ ಕೆ. ತುಳಸಿರಾಮ್, ಕಾರ್ಯಕ್ರಮ ಸಂಯೋಜಕರು, ಡಾ. ಬಿ. ಆಂಜನೇಯರೆಡ್ಡಿ, ವಿಷಯ ತಜ್ಞರು (ಸಸ್ಯ ಸಂರಕ್ಷಣೆ), ಕೃಷಿ ವಿಜ್ಞಾನ ಕೇಂದ್ರ, ಕೋಲಾರ, ಹಾಗೂ ಡಾ. ಕೃಷ್ಣ ಮನೋಹರ್, ಪ್ರಾಧ್ಯಾಪಕರು (ತೋಟಗಾರಿಕೆ), ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು ಮತ್ತು ಡಾ. ಶಂಕರನಾರಾಯಣ, ಪ್ರಾಧ್ಯಾಪಕರು, ರೇಷ್ಮೆ ಕೃಷಿ ಮಹಾವಿದ್ಯಾಲಯ, ಚಿಂತಾಮಣಿ, ತಾಂತ್ರಿಕ ಸಮಾವೇಶ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.




ಇದೇ ಕಾರ್ಯಕ್ರಮವನ್ನು ಕೃಷಿ ಇಲಾಖೆಯು ಬಂಗಾರಪೇಟೆ ಮತ್ತು ಮಾಲೂರು ತಾಲ್ಲೂಕುಗಳಲ್ಲಿ ಆಯೋಜಿಸಿದ್ದು ಡಾ. ಮಾರುತಿ ಪ್ರಸಾದ್, ವಿಷಯ ತಜ್ಞರು (ತೋಟಗಾರಿಕೆ) ಮತ್ತು ಶ್ರೀಮತಿ ಪ್ರೇಮಲತ, ವಿಷಯ ತಜ್ಞರು (ಬೇಸಾಯಶಾಸ್ತ್ರ) ತಾಂತ್ರಿಕ ಸಮಾವೇಶದಲ್ಲಿ ಭಾಗವಹಿಸಿದ್ದರು.

## ಕ್ಷೇತ್ರೋತ್ಸವಗಳು



ಕೃಷಿ ವಿಜ್ಞಾನ ಕೇಂದ್ರ, ಕೋಲಾರ ವತಿಯಿಂದ ದಿನಾಂಕ 10-12-2013 ರಂದು ಮಾಲೂರು ತಾಲ್ಲೂಕಿನ ತಂಬಿಹಳ್ಳಿ ಗ್ರಾಮದಲ್ಲಿ ಹೊಸ ರಾಗಿ ತಳಿ (ಕೆ.ಎಂ.ಆರ್-301) ಪ್ರಾತ್ಯಕ್ಷತೆಯ ಕ್ಷೇತ್ರೋತ್ಸವವನ್ನು ಹಮ್ಮಿಕೊಳ್ಳಲಾಗಿತ್ತು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಆತ್ಮಯೋಜನೆ ನಿರ್ದೇಶಕರಾದ ಶ್ರೀ ಸಂಪಂಗಿ ರಾಮೇಗೌಡ ವಹಿಸಿದ್ದರು. ಶ್ರೀ ಕೆ. ತುಳಸಿರಾಮ್, ಕಾರ್ಯಕ್ರಮ ಸಂಯೋಜಕರು, ಡಾ. ಆಂಜನೇಯರೆಡ್ಡಿ, ವಿಷಯ ತಜ್ಞರು (ಸಸ್ಯ ಸಂರಕ್ಷಣೆ), ಶ್ರೀಮತಿ ಪ್ರೇಮಲತ, ವಿಷಯ ತಜ್ಞರು (ಬೇಸಾಯಶಾಸ್ತ್ರ) ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು. ಸುಮಾರು 60 ರೈತರು ಕಾರ್ಯಕ್ರಮದ ಪ್ರಯೋಜನವನ್ನು ಪಡೆದುಕೊಂಡರು.

ಎಲೆಕೋಸುವಿನಲ್ಲಿ ಸಮಗ್ರ ಪೀಡೆ ನಿರ್ವಹಣೆಯ ಕ್ಷೇತ್ರ ಪ್ರಾತ್ಯಕ್ಷತೆಯನ್ನು ದಿನಾಂಕ 1-1-2014 ರಂದು ಮುದುವತಿ ಗ್ರಾಮದಲ್ಲಿ ಹಮ್ಮಿಕೊಳ್ಳಲಾಗಿತ್ತು. ಶ್ರೀ ಕೆ. ತುಳಸಿರಾಮ್ ಕಾರ್ಯಕ್ರಮ ಸಂಯೋಜಕರು, ಹಾಗೂ ಸಸ್ಯರೋಗ ಶಾಸ್ತ್ರ ಮತ್ತು ತೋಟಗಾರಿಕೆ ವಿಷಯ ತಜ್ಞರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದು, ಕೀಟನಾಶಕವನ್ನು ಮಿತವಾಗಿ ಬಳಸಿ ವಿವಿದ ಹತೋಟಿ ಕ್ರಮಗಳೊಂದಿಗೆ ಪೀಡೆ ನಿರ್ವಹಣೆ ಮಾಡುವುದರಿಂದ ಖರ್ಚು ಕಡಿಮೆ ಮಾಡಬಹುದೆಂದು ತಿಳಿಸಲಾಯಿತು. ಸುಮಾರು 25 ರೈತರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

## ರೋಗ ಪೀಡಿತ ಕ್ಷೇತ್ರ ಬೇಟಿ





ಕೃಷಿ ವಿಜ್ಞಾನ ಕೇಂದ್ರ, ಕೋಲಾರ, ಕೃಷಿ ಇಲಾಖೆ ಮತ್ತು ತೋಟಗಾರಿಕೆ ಇಲಾಖೆಗಳು ಜಂಟಿಯಾಗಿ ವಿವಿಧ ರೈತರ ರೋಗ ಪೀಡಿತ ಕೃಷಿ ಜಮೀನುಗಳಿಗೆ ಭೇಟಿ ನೀಡಲಾಯಿತು. ತಂಡವು ರೋಗದಿಂದ ಹೆಚ್ಚು ಹಾನಿಯಾಗಿರುವ ಬೇತಮಂಗಲದ ತೆಂಗು ತೋಟ, ಮುಳಬಾಗಿಲು ತಾಲ್ಲೂಕಿನಲ್ಲಿ ಹಾನಿಗೊಂಡ ಕೋಸು, ವಡಗೂರಿನಲ್ಲಿ ಟೊಮ್ಯಾಟೋ ಬೆಳೆಗೆ ತಗುಲಿರುವ ಮೊದಲನೆ ಅಂಗಮಾರಿ ರೋಗದ ಹೊಲಗಳು, ಕೊಳತ್ತೂರಿನಲ್ಲಿ ತೊಗರಿ ಬೆಳೆಗೆ ತಗುಲಿರುವ ಬಂಜೆ ನಂಜುರೋಗ ಸ್ಥಳಗಳಿಗೆ ಭೇಟಿ ನೀಡಿ ರೈತರಿಗೆ ಸೂಕ್ತ ನಿಯಂತ್ರಣ ಕ್ರಮಗಳ ಬಗ್ಗೆ ಮಾಹಿತಿ ನೀಡಲಾಯಿತು.

## ತರಬೇತಿ ಕಾರ್ಯಕ್ರಮಗಳು



ಕೃಷಿ ವಿಜ್ಞಾನ ಕೇಂದ್ರ, ಕೋಲಾರ ವತಿಯಿಂದ ತೊಗರಿಯಲ್ಲಿ ಸುಧಾರಿತ ಬೇಸಾಯ ಕ್ರಮಗಳು, ರಾಗಿಯಲ್ಲಿ ಸುಧಾರಿತ ಉತ್ಪಾದನಾ ತಾಂತ್ರಿಕತೆ, ಎಲೆಕೋಸು ಉತ್ಪಾದನಾ ತಾಂತ್ರಿಕತೆ, ಆಲೂಗಡ್ಡೆ ಸುಧಾರಿತ ಉತ್ಪಾದನಾ ತಾಂತ್ರಿಕತೆ ಹಾಗೂ ಗುಲಾಬಿಯ ಸುಧಾರಿತ ಉತ್ಪಾದನೆ ತಾಂತ್ರಿಕತೆಗಳ ಬಗ್ಗೆ ವಿವಿಧ ಗ್ರಾಮಗಳಲ್ಲಿ ತರಬೇತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಯಿತು. ಸದರಿ ಕಾರ್ಯಕ್ರಮದಲ್ಲಿ ಹೆಚ್ಚು ರೈತರುಗಳು ತರಬೇತಿಯ ಪ್ರಯೋಜನವನ್ನು ಪಡೆದುಕೊಂಡರು.

ತೆರೆದ-ಅಂಚೆ

ಇವರಿಗೆ:

..............................................................

..............................................................

..............................................................

ಸಂಪಾದಕರು:
**ಕೆ. ತುಳಸಿರಾಮು**
ಸಹ ಸಂಪಾದಕರು: ಮಾರುತಿ ಪ್ರಸಾದ, ಕೆ.ಆರ್. ಶಶಿಧರ, ನೂರುಲ್ಲಾ ಹಾವೇರಿ
ದೀಪಾ ತೆರದಾಳ, ಸಂತೋಷ, ಉಮೇಶ ನಾಯ್ಕ
ಪ್ರಕಾಶಕರು: ಕಾರ್ಯಕ್ರಮ ಸಂಯೋಜಕರು
ಕೃಷಿ ವಿಜ್ಞಾನ ಕೇಂದ್ರ, ಟಮಕ, ಕೋಲಾರ-563 102. ದೂರವಾಣಿ ಸಂಖ್ಯೆ: 08152-243 099